## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1056
2. ಸದಸ್ಯರ ಹೆಸರು : ಶ್ರೀ ಗೋವಿಂದರಾಜು,
3. ಉತ್ತರಿಸುವ ದಿನಾಂಕ : 20/08/2025
4. ಉತ್ತರಿಸುವ ಸಚಿವರು : ಲೋಕೋಪಯೋಗಿ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಸರ್ಕಾರಿ ನೌಕರರ ವಾಸ್ತವ್ಯಕ್ಕೆ ಅನುಕೂಲವಾಗಲು ಲೋಕೋಪಯೋಗಿ ಇಲಾಖೆ ವ್ಯಾಪ್ತಿಗೆ ಒಳಪಟ್ಟ ವಸತಿ ಗೃಹಗಳ ಸಂಖ್ಯೆ ಎಷ್ಟು; | ರಾಜ್ಯದ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ಸರ್ಕಾರಿ ನೌಕರರ ವಾಸ್ತವ್ಯಕ್ಕೆ ಅನುಕೂಲವಾಗಲು ಈವರೆಗೆ ಒಟ್ಟು 11,829 ವಸತಿ ಗೃಹಗಳನ್ನು ನಿರ್ಮಿಸಲಾಗಿರುತ್ತದೆ. |
| ಆ) | ಕಳೆದ 5 ವರ್ಷದಲ್ಲಿ ಇಲಾಖೆವತಿಯಿಂದ ಎಷ್ಟು ವಸತಿ ಗೃಹಗಳನ್ನು ನಿರ್ಮಿಸಲಾಗಿದೆ ಹಾಗೂ ವಾಸಿಸುತ್ತಿರುವ ಸರ್ಕಾರಿ ಅಧಿಕಾರಿಗಳ ಕುಟುಂಬಗಳಿಗೆ ಯಾವ ರೀತಿಯ ಭದ್ರತೆಯನ್ನು ನೀಡಲಾಗಿದೆ; | ಕಳೆದ 5 ವರ್ಷದ ಅವಧಿಯಲ್ಲಿ (2020 ರಿಂದ 2025ರವರೆಗೆ) ಲೋಕೋಪಯೋಗಿ ಇಲಾಖೆ ವತಿಯಿಂದ ಒಟ್ಟು 258 ವಸತಿ ಗೃಹಗಳನ್ನು ನಿರ್ಮಿಸಲಾಗಿರುತ್ತದೆ.<br><br>ಸರ್ಕಾರಿ ವಸತಿ ಗೃಹಗಳಲ್ಲಿ ವಾಸಿಸುತ್ತಿರುವ ಸರ್ಕಾರಿ ಅಧಿಕಾರಿಗಳ/ಸಿಬ್ಬಂದಿ ಕುಟುಂಬಗಳ ಭದ್ರತೆಗಾಗಿ ಈ ಕೆಳಕಂಡ ಭದ್ರತೆ ವ್ಯವಸ್ಥೆಗಳನ್ನು ನಿರ್ವಹಿಸಲಾಗಿದೆ.<br>1. ಭದ್ರತೆಗಾಗಿ ಕಾಂಪೌಂಡ್‌ಗಳನ್ನು ನಿರ್ಮಿಸಲಾಗಿರುತ್ತದೆ ಹಾಗೂ ಗೇಟ್‌ಗಳನ್ನು ಅಳವಡಿಸಲಾಗಿರುತ್ತದೆ.<br>2. ಅಗತ್ಯವಿರುವ ಕಡೆ ಅನುದಾನದ ಲಭ್ಯತೆಯನುಸಾರ ಸಿ.ಸಿ.ಟಿವಿ ವ್ಯವಸ್ಥೆಯನ್ನು ಕಲ್ಪಿಸಲಾಗಿರುತ್ತದೆ. |
| ಇ) | ರಾಜ್ಯದಲ್ಲಿರುವ ಬಹುತೇಕ ವಸತಿ ಗೃಹಗಳು ಪಾಳು ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಳೆದ 5 ವರ್ಷದಿಂದ ವಸತಿ ಗೃಹಗಳ ನಿರ್ವಹಣೆಗಾಗಿ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ; (ಜಿಲ್ಲಾವಾರು ವಿವರ ನೀಡುವುದು) | ಬಂದಿದೆ.<br><br>ಕಳೆದ 5 ವರ್ಷಗಳಲ್ಲಿ ವಸತಿ ಗೃಹಗಳ ನಿರ್ವಹಣೆಗಾಗಿ ಬಿಡುಗಡೆಯಾದ ಅನುದಾನದ ಜಿಲ್ಲಾವಾರು ವಿವರಗಳನ್ನು **ಅನುಬಂಧ**ದಲ್ಲಿ ನೀಡಲಾಗಿದೆ. |
| ಈ) | ಕೋಲಾರ ನಗರ ಜಿಲ್ಲಾ ಪಂಚಾಯಿತಿ ಕಚೇರಿಯ ಪಕ್ಕದಲ್ಲಿರುವ ಲೋಕೋಪಯೋಗಿ ಇಲಾಖೆಗೆ ಸೇರಿದ ವಸತಿ ನಿಲಯಗಳು ಪಾಳು ಬಿದ್ದಿದ್ದು, ಅನೈತಿಕ ಚಟುವಟಿಕೆಗಳ ತಾಣವಾಗಿರೋದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ? | ಕೋಲಾರ ನಗರದ ಜಿಲ್ಲಾ ಪಂಚಾಯ್ತಿಯ ಕಛೇರಿಯ ಪಕ್ಕದಲ್ಲಿರುವ ಲೋಕೋಪಯೋಗಿ ಇಲಾಖೆಯ ಅಡಿಯಲ್ಲಿ 64 ವಸತಿ ಗೃಹಗಳಿದ್ದು, ಈ ಪೈಕಿ 56 ವಸತಿಗೃಹಗಳು ವಾಸಕ್ಕೆ ಯೋಗ್ಯವಿದ್ದು, ವಿವಿಧ ಇಲಾಖಾ ಅಧಿಕಾರಿಗಳಿಗೆ/ಸಿಬ್ಬಂದಿಗಳಿಗೆ ಹಂಚಿಕೆಯಾಗಿರುತ್ತದೆ. ಉಳಿದ 08 ವಸತಿ ಗೃಹಗಳು ಶಿಥಿಲಾವಸ್ಥೆಯಲ್ಲಿದ್ದು ವಾಸಿಸಲು ಯೋಗ್ಯವಿರುವುದಿಲ್ಲ. |

| | | |
|---|---|---|
| | | ಸದರಿ ವಸತಿ ಗೃಹಗಳ ಸಮುಚ್ಚಯದಲ್ಲಿ ಯಾವುದೇ ರೀತಿಯ ಅನೈತಿಕ ಚಟುವಟಿಕೆಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಶಿಥಿಲಾವಸ್ಥೆಯಲ್ಲಿರುವ 08 ವಸತಿಗೃಹಗಳನ್ನು ಕೆಡವಿ ಹೊಸದಾಗಿ ವಸತಿಗೃಹಗಳನ್ನು ನಿರ್ಮಿಸುವ ಪ್ರಸ್ತಾವನೆಯಿದ್ದು, ಸೂಕ್ತ ಲೆಕ್ಕ ಶೀರ್ಷಿಕೆಯಡಿ ಅಗತ್ಯ ಅನುದಾನ ಒದಗಿಸಿಕೊಂಡು ನಿಯಮಾನುಸಾರ ವಸತಿಗೃಹಗಳನ್ನು ನಿರ್ಮಿಸಲು ಅಗತ್ಯ ಕ್ರಮ ವಹಿಸಲಾಗುತ್ತದೆ. |

**ಸಂಖ್ಯೆ: ಲೋಇ 61 ಬಿಎಲ್‌ಕ್ಯೂ 2025**

**(ಸತೀಶ ಜಾರಕಿಹೊಳಿ),**
ಲೋಕೋಪಯೋಗಿ ಸಚಿವರು.

**ಶ್ರೀ ಗೋವಿಂದರಾಜು, ಮಾನ್ಯ ವಿಧಾನ ಪರಿಷತ್ತು ಸದಸ್ಯರು ಮಂಡಿಸಿರುವ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:1056ಕ್ಕೆ ಅನುಬಂಧ**

| | | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳಲ್ಲಿ) | | | | |
|---|---|---|---|---|---|---|
| ಕ್ರಸಂ | ಜಿಲ್ಲೆ | **2020-21** | **2021-22** | **2022-23** | **2023-24** | **2024-25** |
| 1 | ಬೆಂಗಳೂರು | 1257.92 | 2032.35 | 2075.49 | 2272.60 | 2956.36 |
| | | 2918.46 | 3363.19 | 3661.84 | 2620.68 | 2938.58 |
| | | 1154.60 | 743.41 | 953.38 | 1276.16 | 758.74 |
| | | 76.23 | 132.40 | 119.18 | 205.63 | 98.35 |
| 2 | ರಾಮನಗರ | 10.47 | 11.02 | 10.26 | 16.92 | 17.34 |
| | | 23.32 | 45.25 | 0.83 | 12.70 | 19.07 |
| 3 | ಕೋಲಾರ | 58.48 | 45.02 | 73.04 | 77.23 | 51.96 |
| 4 | ಚಿಕ್ಕಬಳ್ಳಾಪುರ | 19.76 | 51.88 | 20.73 | 26.81 | 35.40 |
| 5 | ತುಮಕೂರು | 131.21 | 162.14 | 102.44 | 278.84 | 266.24 |
| | | 160.46 | 74.41 | 68.95 | 30.94 | 110.76 |
| 6 | ಮೈಸೂರು | 13.90 | 20.57 | 0.00 | 5.00 | 33.21 |
| | | 195.58 | 215.35 | 45.03 | 250.19 | 209.74 |
| | | 57.95 | 100.34 | 34.19 | 95.22 | 64.83 |
| 7 | ಮಂಡ್ಯ | 212.08 | 306.72 | 39.19 | 64.33 | 105.90 |
| 8 | ಚಾಮರಾಜನಗರ | 114.78 | 25.96 | 11.55 | 21.99 | 50.99 |
| 9 | ಹಾಸನ | 328.96 | 343.04 | 245.46 | 474.50 | 441.84 |
| 10 | ಕೊಡಗು | 261.15 | 208.94 | 9.06 | 130.49 | 98.04 |
| | **ಒಟ್ಟು** | **6995.31** | **7881.99** | **7470.62** | **7860.23** | **8257.35** |
| 11 | ಕಲಬುರಗಿ | 359.42 | 833.62 | 834.00 | 235.28 | 1064.00 |
| 12 | ಸೇಡಂ | 114.74 | 180.30 | 99.00 | 68.32 | 44.00 |
| 13 | ಯಾದಗಿರ | 123.01 | 83.22 | 360.00 | 75.83 | 177.00 |
| 14 | ಬೀದರ | 269.83 | 328.23 | 583.00 | 86.03 | 212.00 |
| 15 | ಬಳ್ಳಾರಿ | 337.76 | 255.63 | 127.26 | 81.48 | 137.00 |
| 16 | ಹೊಸಪೇಟೆ | 125.83 | 160.20 | 80.01 | 69.34 | 37.00 |

| ಕ್ರಸಂ | ಜಿಲ್ಲೆ | 2020-21 | 2021-22 | 2022-23 | 2023-24 | 2024-25 |
|---|---|---|---|---|---|---|
| 17 | ರಾಯಚೂರು | 282.34 | 215.95 | 350.00 | 108.93 | 143.00 |
| 18 | ಕೊಪ್ಪಳ | 105.25 | 80.24 | 94.32 | 79.38 | 111.00 |
| | ಒಟ್ಟು | **1718.18** | **2137.39** | **2527.59** | **804.59** | **1925.00** |
| 19 | ಧಾರವಾಡ | 359.60 | 430.52 | 216.23 | 792.15 | 659.63 |
| 20 | ಹಾವೇರಿ | 96.18 | 115.36 | 98.14 | 103.51 | 148.00 |
| 21 | ಗದಗ | 129.29 | 103.60 | 167.83 | 203.00 | 80.00 |
| 22 | ಉತ್ತರಕನ್ನಡ | 148.31 | 322.80 | 378.87 | 271.19 | 122.00 |
| 23 | ಉತ್ತರಕನ್ನಡ | 390.48 | 223.43 | 296.80 | 175.66 | 125.00 |
| 24 | ಬೆಳಗಾವಿ | 256.57 | 378.74 | 473.26 | 324.71 | 238.00 |
| 25 | ಬೆಳಗಾವಿ | 149.64 | 137.46 | 68.37 | 96.57 | 70.00 |
| 26 | ಬಾಗಲಕೋಟ | 214.54 | 169.94 | 149.55 | 107.39 | 176.90 |
| 27 | ವಿಜಯಪುರ | 324.36 | 115.57 | 150.97 | 206.03 | 135.00 |
| | **ಒಟ್ಟು** | **2068.97** | **1997.42** | **2000.02** | **2280.21** | **1754.53** |
| 28 | ಶಿವಮೊಗ್ಗ ವಿಭಾಗ | 34.43 | 82.27 | 102.98 | 25.36 | 83.00 |
| 29 | ವಿಶೇಷ ವಿಭಾಗ, ಶಿವಮೊಗ್ಗ | 91.70 | 68.25 | 462.55 | 59.39 | 157.15 |
| 30 | ಚಿತ್ರದುರ್ಗ | 219.48 | 138.36 | 85.63 | 95.57 | 159.97 |
| 31 | ದಾವಣಗೆರೆ | 57.48 | 37.37 | 74.69 | 41.12 | 113.63 |
| 32 | ಚಿಕ್ಕಮಗಳೂರು | 43.00 | 48.00 | 50.50 | 50.34 | 64.18 |
| 33 | ಉಡುಪಿ | 114.45 | 135.94 | 104.12 | 207.69 | 130.96 |
| 34 | ಮಂಗಳೂರು | 647.47 | 311.20 | 455.15 | 182.16 | 332.62 |
| | ಒಟ್ಟು | **1208.01** | **821.39** | **1335.62** | **661.63** | **1041.51** |
| | Grand Total | **11990.47** | **12838.19** | **13333.85** | **11606.66** | **12978.39** |